ರಾಮಾಪುರದಲ್ಲಿ ಕ್ರೀಡಾಂಗಣದ ನಿರ್ಮಾಣ

೪೭೬ ಶ್ರೀ ಚಂದ್ರಶೇಖರ್ ಮಾವಿನಿ (ಸವದತ್ತಿ)--ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ನೇ ಸಾಲಿನಲ್ಲಿ ಎನ್‌ಆರ್‌ಇಪಿ ಮೂಲಕ ಕಾಮಗಾರಿಯಲ್ಲಿ ಸವದತ್ತಿ ತಾಲ್ಲೂಕಿನ ರಾಮಾಪುರದಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಲು ಕೆಲಸವು ಯಾವ ಹಂತದಲ್ಲಿದೆ.

ಆ) ಈ ಸ್ಟೇಡಿಯಂ ನಿರ್ಮಾಣಕ್ಕೆ ಅಂದಾಜು ಮಾಡಿದ ಹಣವೆಷ್ಟು, ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು.

ಇ) ಸ್ಟೇಡಿಯಂ ನಿರ್ಮಾಣದ ಕೆಲಸ ಈಗ ಸ್ಥಗಿತವಾಗಿರಲು ಕಾರಣವೇನು, ಹಾಗೂ ಸದರಿ ಕೆಲಸ ಪ್ರಾರಂಭಿಸಲು ವಿಚಾರ ಸರ್ಕಾರದವರಿಗೆ ಇದೆಯೇ, ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸುವರು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು) --

ಅ) ಕೆಲವು ಸಾಮಗ್ರಿಗಳನ್ನು ಸಂಗ್ರಹಿಸಿರುತ್ತದೆ.

ಆ) ಅಂದಾಜು ವೆಚ್ಚ ೧೨.೫೦ ಲಕ್ಷರೂಗಳು.
ಖರ್ಚಾದ ಹಣ ೦೦.೬೨ ಲಕ್ಷರೂಗಳು.

ಇ) ಸದರಿ ಕೆಲಸವನ್ನು ಅಭಾವ ಪರಿಹಾರ ಕಾರ್ಯಕ್ರಮಗಳಡಿಯಲ್ಲಿ ತೆಗೆದುಕೊಳ್ಳಲಾಗಿತ್ತು. ೧೯೮೬ನೇ ಜೂನ್ ಅಂತ್ಯದಲ್ಲಿ ಅಭಾವ ಪರಿಹಾರ ಕಾರ್ಯಕ್ರಮವನ್ನು ನಿಲ್ಲಿಸಿರುತ್ತದೆ. ಪ್ರಸ್ತುತ ಕಾಮಗಾರಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ೧೯೮೬-೮೭ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಆಳವಡಿಸಿಕೊಂಡು ಕಾರ್ಯ ಪ್ರಾರಂಭಿಸಲು ಆದೇಶವಿತ್ತಿರುತ್ತದೆ.

ಶ್ರೀ ಚಂದ್ರಶೇಖರ ಮಾವಿನಿ.--ಕೆಲವು ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆಯೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಕನ್ನಡ ಪ್ರಾಥಮಿಕ ಶಾಲೆ ಇದೆ. ಶಾಲೆಯು ಗ್ರೌಂಡ್‌ನಲ್ಲಿ ಕಲ್ಲುಗಳು ತುಂಬಾ ಇದ್ದು, ಮಕ್ಕಳು ಆಟವಾಡುವುದಕ್ಕೆ ತೊಂದರೆಯಾಗಿದೆ. ಬೇಗನೆ ಕೆಲಸ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.--ಇದು ಆಕ್ಷನ್ ಪ್ಲಾನ್‌ನಲ್ಲಿ ಸೇರಿಲ್ಲ. ಕೆಲವು ವಸ್ತುಗಳನ್ನು ಸಂಗ್ರಹ ಮಾಡಲಾಗಿದೆ. ಈ ವರ್ಷ ಆಕ್ಷನ್ ಪ್ಲಾನ್‌ನಲ್ಲಿ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಅಪ್ರೂವಲ್ ಮಾಡಲಾಗಿದೆ. ಇದಕ್ಕೆ ಕೇಂದ್ರದ ಅಧಿಕಾರಿಗಳ ತಂಡ ಮಂಜೂರಾತಿ ಕೊಡಬೇಕು. ಮಂಜೂರಾತಿ ಕೊಟ್ಟ ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದು.

ಶ್ರೀ ಚಂದ್ರಶೇಖರ್ ಮಾವಿನಿ.--ಅಲ್ಲಿ ಏನೊಂದು ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಅದನ್ನು ತೆರವು ಮಾಡಿಸಿ, ಮಕ್ಕಳಿಗೆ ಆಟವಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಸಿಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.--ಅದನ್ನು ಮಾಡಿಸುತ್ತೇನೆ.

ಬೀಳಗಿ ತಾಲ್ಲೂಕಿನ ತೆಗ್ಗಿ ಗ್ರಾಮಕ್ಕೆ ಕಂಡಿಯುವ ನೀರಿನ ಯೋಜನೆ

೮೨೫ ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).--ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ, ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀಳಗಿ ತಾಲ್ಲೂಕಿನ ದೊಡ್ಡ ಗ್ರಾಮವಾದ ತೆಗ್ಗಿಯಲ್ಲಿ ನೀರು ಪೂರೈಕೆ ಯೋಜನೆ ಕಳೆದ ೩ ವರ್ಷಗಳಿಂದ ಅರ್ಧದಲ್ಲೇ ನಿಂತಿರುವುದು ಸರಕಾರಕ್ಕೆ ತಿಳಿದಿದೆಯೇ ?

ಆ) ಈ ಯೋಜನೆಯನ್ನು ಪೂರ್ತಿಗೊಳಿಸಲು ಜನಾರೋಗ್ಯ ಶಿಲ್ಪ ಇಲಾಖೆ ಈವರೆಗೆ ಮಾಡಿರುವ ಕೆಲಸವೆಷ್ಟು ?

ಇ) ಅದನ್ನು ಪೂರ್ಣವಾಗಲು ಎಷ್ಟು ಸಮಯ ಬೇಕು ಹಾಗೂ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು ?